ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು:

ಮುಂದುವರೆದ ಪಾಟೀ ಸವಾಲು ಶ್ರೀ ಎಂ ಎಲ್ ವಿ ಎದುರುದಾರ ಪರ ವಕೀಲರಿಂದಃ

ನಾನು ಎದುರುದಾರರು ಮಾಡಿರುವ ಅಸಲು ದಾವೆಯನ್ನು ರಾಜಿ ಮಾಡಿಕೊಳ್ಳುವ ಸಂಬಂಧ ನಾನುನಮ್ಮ ವಕೀಲರಿಗೆ ಮಾಹಿತಿ ಹೇಳಿದ್ದೇನೆ. ಎದುರುದಾರರು ನಮ್ಮ ಮನೆಯ ಪಕ್ಕದವರೇ ಆಗಿರುವ ಕಾರಣ ನಾನು ಅವರಿಗೆ ರಾಜಿ ಮಾಡಿಕೊಳ್ಳಲು ಹೇಳಬಹುದಿತ್ತು ಎಂದರೆ ಸಾಕ್ಷಿ ನಾನು ಅವರಿಗೂ ಸಹ ರಾಜಿ ಮಾಡಿಕೊಳ್ಳೋಣ ಅಂತ ಹೇಳಿದ್ದೆ ಎನ್ನುತ್ತಾರೆ. ನಾನು ಎದುರುದಾರರಿಗೆ ರಾಜಿ ಮಾಡಿಕೊಳ್ಳೋಣ ಅಂತ ಅವರು ಅಸಲು ದಾವೆ ಮಾಡಿದ ನಂತರ ಅವರಿಗೆ ನಾನು ಹೇಳಿದ್ದೆ. ರಾಜಿ ಅಂದರೆ ಅವರಿಗೆ ಅವರ ಮೂಲ ಹಣ ಮತ್ತು ಬಡ್ಡಿ ಎರಡನ್ನೂ ಕೊಡವಂತೆ ತೀರ್ಮಾನ ಮಾಡಲು ಅವರಿಗೆ ಹೇಳಿದ್ದೆ. ಈ ವಿಚಾರವನ್ನು ನಮ್ಮ ವಕೀಲರಿಗೂ ಹೇಳಿದಾಗ ಅವರು ಪ್ರತಿ ಮುದ್ದತಿ ದಿನಾಂಕ ಮುಗಿಯಲಿ ಅಂತ ಮುಂದೂಡುತ್ತಾ ಬಂದಿದ್ದರು ಎನ್ನುತ್ತಾರೆ. ನಾನು ಎದುರುದಾರರ ಜೊತೆ ರಾಜಿ ಮಾಡಿಕೊಳ್ಳಲು ಯಾವತ್ತೂ ಮಾತನಾಡಲು ನಮ್ಮ ವಕೀಲರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಎದುರುದಾರರು ರಾಜಿ ಮಾಡಿಕೊಳ್ಳಲು ಮುಂದೆ ಬರದ ಬಗ್ಗೆ ನನಗೆ ನೋಟಿಸ್ ಕೊಡಬೇಕು ಅಂತ ನನಗೆ ಗೊತ್ತಾಗಲಿಲ್ಲ. ನಾನು ಎದುರುದಾರರು ಮಾಡಿದ ಅಸಲು ದಾವೆಯಲ್ಲಿ ತಕರರೂ ಸಲ್ಲಿಸಲು ಸಮಯ ಕೋರಿ ನಮ್ಮ ವಕೀಲರ ಮೂಲಕ ಅರ್ಜಿ ಮಾಡಿ ಪ್ರಮಾಣ ಪತ್ರ ಸಹ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಕರಾರೂ ಪತ್ರ ನೈಜ್ಯವಾದ ಕಾರಾರು ಪತ್ರ ಎನ್ನುವುದು ಮತ್ತು ಆಸ್ತಿ ಮಾರಾಟಕ್ಕಾಗಿ ಅದನ್ನು ಬರೆದುಕೊಟ್ಟಿತ್ತು ಎನ್ನುವುದು ಮತ್ತು ಆ ಎರಡೂ ಕಾರಣಗಳಿಗಾಗೇ ನಾನು ನಮ್ಮ ತಕರಾರನ್ನು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರಿಗೆ ಕರಾರು ಪತ್ರ ನಾವೇ ಬರೆದುಕೊಟ್ಟಿದ್ದೇವೆ ಅಂತ ಮತ್ತು ದಾವೆ ಹೇಗಾದರೂ ತೀರ್ಮಾನ ಆಗಲೀ ಅಂತ ಹೇಳಿದ್ದೆ ಎಂದರೆ ಸರಿಯಲ್ಲ.

ಎದರುದಾರರು ಮಾಡಿದ ಅಸಲು ದಾವೆ ಡಿಕ್ರಿ ಆದ ನಂತರ ಜಾರಿ ಕೇಸಿನಲ್ಲಿ ನಾನು ನಮ್ಮ ವಕೀಲರ ಮೂಲಕ ವಕಾಲತ್ತು ಸಲ್ಲಿಸಿದ್ದೆ ಎಂದರೆ ಸಾಕ್ಷಿ ನಮ್ಮ

ವಕೀಲರು ನನ್ನ ಕಡೆಯಿಂದ ಮೊದಲೆ 3-4 ವಕಾಲತ್ತಿಗೆ ಸಹಿ ಪಡೆದುಕೊಂಡಿದ್ದರು ಎನ್ನುತ್ತಾರೆ. ನಾನು ನಮ್ಮ ವಕೀಲರ ಮೇಲಿನ ನಂಬಿಕೆಯ ಅನುಸಾರ ಆ ರೀತಿ ನಾನು 3-4 ವಕಾಲತ್ತಿಗೆ ಸಹಿ ಮಾಡಿಕೊಟ್ಟಿದ್ದೇನೆ ಎನ್ನುತ್ತಾರೆ. ದಾವೆಯಲ್ಲಿ ನಮ್ಮ ಪರ ವಕೀಲರು ನನಗೆ ಮತ್ತು ಎದುರುದಾರರಿಗೆ ದೂರದ ಸಂಬಂಧಿಕರು ಎಂದರೆ ನಿಜ. ಅಸಲು ದಾವೆಯಲ್ಲಿ ನನಗೆ ಮೋಸ ಮಾಡಿದ್ದಾರೆ ಅಂತ ಹೇಳಿದ್ದು ಅದೇ ಪ್ರಕಾರ ಬೇರೆ ಯಾರದರೂ ಕಕ್ಷಿದಾರರಿಗೆ ಆ ರೀತಿ ಮೋಸ ಮಾಡಿದ್ದರಾ ಅಂತ ನೀವು ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ ನಮ್ಮ ವಕೀಲರ ವಿರುದ್ದ ಬಾರ್ ಕೌನ್ಸಿಲ್‌ಗೆ ದೂರು ನೀಡಿದಂತೆ ಅದೇ ವಕೀಲರ ವಿರುದ್ದ ಇಂತಹ ಬೇರೆ ದೂರುಗಳು ಇದ್ದ ಬಗ್ಗೆ ವಿಚಾರಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಪ್ರತಿ ಮುದ್ದತಿ ದಿನಾಂಕವನ್ನು ನಿಮ್ಮ ವಕೀಲರು ಚೀಟಿಯಲ್ಲಿ ಬರೆದುಕೊಡುತ್ತಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಮುದ್ದತಿ ದಿನಾಂಕವನ್ನು ನಮ್ಮ ವಕೀಲರು ನನಗೆ ಫೋನ್ ಮೂಲಕ ಹೇಳುತ್ತಿದ್ದರು ಎನ್ನುತ್ತಾರೆ. ಜಾರಿ ಅರ್ಜಿಯಲ್ಲಿ ಕ್ರಯ ಪತ್ರ ನೋಂದಣಿ ಆದ ಬಗ್ಗೆ ನನಗೆ ಮಾಹಿತಿ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಪಾರ್ಟಿಗಳು ನ್ಯಾಯಾಲಯದ ಮೂಲಕ ಸ್ಥಳದ ಸ್ವಾಧೀನ ಪಡೆಯಲು ಬಂದಾಗ ದಾವೆಯ ವಿಚಾರ ನನಗೆ ಗೊತ್ತಾಗಿದೆ ಎನ್ನುತ್ತಾರೆ. ಸ್ವಾಧೀನ ಕೊಡಿಸಲು ನ್ಯಾಯಾಲಯದಿಂದ ಅಮೀನಾ ಬಂದಾಗ ನಾನು ನಮ್ಮ ವಕೀಲರು ಸರಿ ಇಲ್ಲ ಅಂತ ತಿಳಿದುಕೊಂಡು ಬೇರೆ ವಕೀಲರನ್ನು ನಾನು ನೇಮಿಸಿಕೊಂಡಿದ್ದೇನೆ. ಹೊಸದಾಗಿ ನೇಮಿಸಿಕೊಂಡ ವಕೀಲರ ಮೂಲಕ ಜಾರಿಯನ್ನು ಯಾಕೆ ತಡೆ ಮಾಡಿಸಿಲ್ಲ ಎಂದರೆ ಸಾಕ್ಷಿ ಈಗ ಈ ಅರ್ಜಿ ಮೂಲಕ ಮಾಡಿದ್ದಾರೆ ಎನ್ನುತ್ತಾರೆ. ದಾವೆಯಲ್ಲಿ ಇದ್ದಂತಹ ನಮ್ಮ ವಕೀಲರು ರಾಯರದೊಡ್ಡಿಯಲ್ಲಿ ಇದ್ದ ಅವರ ಮನೆಯಲ್ಲೆ ಕಛೇರಿ ಮಾಡಿಕೊಂಡಿದ್ದರು. ಬಿಳಗುಂಬದಿಂದ ರಾಯರದೊಡ್ಡಿಗೆ 5 ಕಿ.ಮೀ ಅಂತರ ಇದೆ. ಕ್ರಯದ ಕರಾರಿನಲ್ಲಿ ತೋರಿಸಿದ ಮೌಲ್ಯದ ಬೆಲೆ ಆ ಆಸ್ತಿಯ ಮಾರುಕಟ್ಟೆ ಬೆಲೆ ಆ ಕಾಲಕ್ಕೆ ಅಷ್ಟೆ ಇತ್ತು ಎಂದು ಹೇಳಿದರೆ ಸರಿಯಲ್ಲ. ನನಗೆ ಅಸಲು ದಾವೆಯ ಪೂರ್ತಿ ವಿಚಾರಗಳು, ಜಾರಿ ಅರ್ಜಿಯಲ್ಲಿ ನಡೆದ ಎಲ್ಲಾ ಹಂತಗಳು ಮತ್ತು ಕ್ರಯ ಪತ್ರ ಹಾಗೂ

ಸ್ವಾಧೀನ ಪಡೆದುಕೊಂಡ ವಿಚಾರಗಳ ಬಗ್ಗೆ ಮೊದಲೇ ನನಗೆ ಮಾಹಿತಿ ಇತ್ತು ಎಂದು ಹೇಳುವುದು ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಎದುರುದಾರಿಗೆ ತೊಂದರೆ ಮಾಡಲು ಈ ಸುಳ್ಳು ಅರ್ಜಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ಸವಾಲು : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ.)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.